# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1070

ಸದಸ್ಯರ ಹೆಸರು : ಶ್ರೀ ಕೆ.ಎ ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು)

ಉತ್ತರಿಸಬೇಕಾದ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸಬೇಕಾದ ದಿನಾಂಕ : 18-12-2024

| | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯ ಸರ್ಕಾರ ಸಾರಿಗೆ ಇಲಾಖೆಗೆ ನೂತನವಾಗಿ ವಾಹನಗಳ ತಪಾಸಣೆಗಾಗಿ Automated Testing Station ಗಳನ್ನು ಸ್ಥಾಪಿಸಲು ಮುಂದಾಗಿದೆಯೇ; ಹಾಗಿದ್ದಲ್ಲಿ, ಇಂತಹ ತಪಾಸಣಾ ಕೇಂದ್ರಗಳ ಸ್ಥಾಪನೆಯಿಂದ ನಾಗರೀಕರಿಗೆ / ಗ್ರಾಹಕರಿಗೆ ದೊರೆಯುವ ಸೌಲಭ್ಯಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು) | ಕೇಂದ್ರ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಲಯಾಗಳಾದ ಅಧಿಸೂಚನೆ ಸಂಖ್ಯೆ: GSR 652 (E), ದಿನಾಂಕ:23.09.2021ರಲ್ಲಿ ಕೇಂದ್ರ ಮೋಟಾರು ವಾಹನಗಳ ನಿಯಮಗಳು 1989ಕ್ಕೆ ಸೇರ್ಪಡೆ ಮಾಡಿದ CHAPTER XIರ ಅನುಸಾರ ವಾಹನಗಳ ಅರ್ಹತಾ ಪ್ರಮಾಣ ಪತ್ರ ನವೀಕರಿಸುವ ಸಂದರ್ಭದಲ್ಲಿ ಕಡ್ಡಾಯವಾಗಿ ವಾಹನಗಳು ಸ್ವಯಂಚಾಲಿತ ತಪಾಸಣಾ ಕೇಂದ್ರಗಳಲ್ಲಿ ತಪಾಸಣೆಗೊಳಪಡಬೇಕಾಗಿದ್ದು, ಈ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ 13 ಸ್ಥಳಗಳಲ್ಲಿ DBFOT (Design Build Finance Operate and Transfer) ಮಾದರಿಯಲ್ಲಿ ಹಾಗೂ 19 ಸ್ಥಳಗಳಲ್ಲಿ BOO (Build Own Operate) ಮಾದರಿಯಲ್ಲಿ PPP (Public Private Partnership) ಅಡಿಯಲ್ಲಿ ಸ್ಥಾಪಿಸಲು ಕ್ರಮವಹಿಸಲಾಗಿದೆ.<br>ಸದರಿ ಕೇಂದ್ರಗಳ ಸ್ಥಾಪನೆಯಿಂದ ಮಾನವ ಹಸ್ತಕ್ಷೇಪವಿಲ್ಲದೇ, ವಾಹನಗಳ ಅರ್ಹತೆಯನ್ನು ವಿವಿಧ ಆಧುನಿಕ ಯಂತ್ರೋಪಕರಣ ಮೂಲಕ ಪರೀಕ್ಷೆಗೊಳಪಡಿಸಿ ಅರ್ಹತಾ ಪತ್ರ ನವೀಕರಣ ಮಾಡಲಾಗುವುದರ ಜೊತೆಗೆ ಈ ಕೆಳಕಂಡ ಸೌಲಭ್ಯ / ಅನುಕೂಲಗಳು ದೊರೆಯುತ್ತವೆ.<br>**ರಸ್ತೆ ಸುರಕ್ಷತೆ ಸುಧಾರಣೆ** : ಸ್ವಯಂಚಾಲಿತ ಮತ್ತು ವೈಜ್ಞಾನಿಕ ಪರೀಕ್ಷೆ ಮೂಲಕ ಅನರ್ಹವಾದ ವಾಹನಗಳನ್ನು ಪತ್ತೆ ಹಚ್ಚುವುದರಿಂದ ರಸ್ತೆ ಅಪಘಾತಗಳನ್ನು ಕಡಿಮೆಯಾಗುತ್ತವೆ.<br>**ಪರಿಸರ ಸಂರಕ್ಷಣೆ** : ಹೆಚ್ಚು ಹೊಗೆ ಸೂಸುವ ವಾಹನಗಳನ್ನು ಪತ್ತೆಹಚ್ಚುವುದರಿಂದ, ವಾಯು ಮಾಲಿನ್ಯವನ್ನು ಕಡಿಮೆ ಮಾಡಲು ಸಹಾಯವಾಗುತ್ತದೆ.<br>**ಪಾರದರ್ಶಕತೆ ಮತ್ತು ತಟಸ್ಥತೆ** : ಯಂತ್ರಾಧಾರಿತ ಪರೀಕ್ಷೆಯು ಮಾನವೀಯ ತಾರತಮ್ಯವನ್ನು ನಿವಾರಿಸುತ್ತದೆ. ಮತ್ತು ನ್ಯಾಯಯುತ ಹಾಗೂ ಸಾಮರಸ್ಯವನ್ನು ಖಚಿತಪಡಿಸುತ್ತದೆ.<br>**ಸೌಲಭ್ಯ** : ನಾಗರೀಕರು ಆನ್ ಲೈನ್ ಮೂಲಕ ವಾಹನ ತಪಾಸಣೆಯ ಸಮಯವನ್ನು ಬುಕ್ ಮಾಡಿಕೊಳ್ಳಬಹುದಾಗಿರುವುದರಿಂದ, ಹೆಚ್ಚಿನ ಸಮಯ ವ್ಯಯಿಸುವುದು ತಪ್ಪುತ್ತದೆ. ಗ್ರಾಹಕರಿಗೆ ಉತ್ತಮ ಅನುಭವವಾಗುತ್ತದೆ.<br>**ಕ್ಷಮತೆ** : ಹಸ್ತ ಚಾಲಿತ ವಿಧಾನಗಳಿಗಿಂತ ವೇಗವಾಗಿ ಮತ್ತು ನಿಖರವಾಗಿ ಪರೀಕ್ಷೆ ನಡೆಸಬಹುದು.<br>**ಡಿಜಿಟಲ್‌ನ ಉಪಯೋಗ** : ಪರೀಕ್ಷಾ ವರದಿ ಮತ್ತು ಫಿಟ್‌ನೆಸ್ ಪ್ರಮಾಣ ಪತ್ರಗಳನ್ನು ವಾಹನ್ ಪೋರ್ಟಲ್‌ಗೆ ಲಿಂಕ್ ಮಾಡಿರುವುದರಿಂದ ಆನ್ ಲೈನ್ ನಲ್ಲಿ ಪಡೆಯಬಹುದಾಗಿದೆ. |

| | ಪ್ರಶ್ನೆ | ಉತ್ತರ |
|---|---|---|
| | | **ಆರ್ಥಿಕ ಪ್ರಯೋಜನಗಳು** : ವಾಹನಗಳ ಸಮಸ್ಯೆಗಳನ್ನು ತೀವ್ರಗೊಳ್ಳುವ ಮೊದಲು ಪತ್ತೆ ಹಚ್ಚುವುದರಿಂದ, ದುರಸ್ತಿ ವೆಚ್ಚ ಮತ್ತು ದಂಡ ಪಾವತಿಯನ್ನು ತಪ್ಪಿಸಬಹುದು.<br>**ಏಕತೆ** : ಫಿಟ್‌ನೆಸ್ ಪ್ರಮಾಣಪತ್ರಗಳು ದೇಶಾದ್ಯಂತ ಮಾನ್ಯವಾಗುವುದರಿಂದ, ವಾಹನಗಳ ವರ್ಗಾವಣೆ ಸುಲಭಗೊಳಿಸುತ್ತದೆ. |
| ಆ. | ಈ ತಪಾಸಣಾ ಕೇಂದ್ರಗಳ ನಿರ್ವಹಣೆ ಮತ್ತು ಉಸ್ತುವಾರಿ ಹಾಗೂ ನಿಗಾವಹಿಸಲು ರೂಪಿಸಿರುವ ವ್ಯವಸ್ಥೆ ಯಾವುದು; (ಪೂರ್ಣ ಮಾಹಿತಿ ನೀಡುವುದು) | • PPP ಅಡಿಯಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿರುವ ತಪಾಸಣಾ ಕೇಂದ್ರಗಳ ನಿರ್ವಹಣೆಗೆ ಸಂಬಂಧಿಸಿದಂತೆ ಕರೆಯಲಾಗುವ ಟೆಂಡರ್‌ನಲ್ಲಿ ಆಯ್ಕೆಯಾಗುವ ಸಂಸ್ಥೆಯೇ ಕೇಂದ್ರದ ಸ್ಥಾಪನೆ ಮತ್ತು ನಿರ್ವಹಣೆಯನ್ನು ಮಾಡಬೇಕಾಗುತ್ತದೆ.<br>• ಉಸ್ತುವಾರಿ ಮತ್ತು ಮೇಲ್ವಿಚಾರಣೆಯನ್ನು ಆಯಾ ವ್ಯಾಪ್ತಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಹಾಗೂ ಮೋಟಾರು ವಾಹನ ನಿರೀಕ್ಷಕರುಗಳು ನಿರ್ವಹಿಸುತ್ತಾರೆ. |
| ಇ. | ಸದರಿ ಈ ತಪಾಸಣಾ ಕೇಂದ್ರಗಳನ್ನು "ನಿರ್ಮಿಸು-ಹೊಂದು-ನಿರ್ವಹಿಸುವ" ಎನ್ನುವ ಆಧಾರದ ಮೇಲೆ ಖಾಸಗೀ ಭಾಗಿತ್ವಕ್ಕೆ ನೀಡಲು ಉದ್ದೇಶಿಸಿದೆಯೇ; (ಪೂರ್ಣ ಮಾಹಿತಿ ನೀಡುವುದು) | ರಾಜ್ಯಾದ್ಯಂತ ಸಾರಿಗೆ ಇಲಾಖೆಯು ಜಮೀನು ಹೊಂದಿರುವ 13 (ದೇವನಹಳ್ಳಿ, ತುಮಕೂರು, ಕೋಲಾರ, ಶಿವಮೊಗ್ಗ, ಬೆಳಗಾವಿ, ಗದಗ, ರಾಣೆಬೆನ್ನೂರು, ದಾವಣಗೆರೆ, ವಿಜಯಪುರ, ಬಾಗಲಕೋಟೆ, ಯಾದಗಿರಿ, ಬಳ್ಳಾರಿ, ಬೀದರ್) ಸ್ಥಳಗಳಲ್ಲಿ DBFOT (Design Build Finance Operate and Transfer) ಮಾದರಿಯಲ್ಲಿ ಹಾಗೂ ಜಮೀನು ಲಭ್ಯವಿಲ್ಲದ 19 (ಚಾಮರಾಜನಗರ, ಹಾಸನ, ಮಂಡ್ಯ, ಚಿಕ್ಕಮಗಳೂರು, ಉಡುಪಿ, ಮಡಿಕೇರಿ, ಮಂಗಳೂರು, ಚಿತ್ರದುರ್ಗ, ಕಾರವಾರ, ಕಲಬುರಗಿ, ರಾಯಚೂರು, ವಿಜಯನಗರ (ಹೊಸಪೇಟೆ), ಕೊಪ್ಪಳ, ಚಿಕ್ಕಬಳ್ಳಾಪುರ, ರಾಮನಗರ, ಬೆಂಗಳೂರು (ದಕ್ಷಿಣ), ಬೆಂಗಳೂರು (ಪೂರ್ವ), ಬೆಂಗಳೂರು (ಪಶ್ಚಿಮ) ಮತ್ತು ಬೆಂಗಳೂರು (ಕೇಂದ್ರ)) ಸ್ಥಳಗಳಲ್ಲಿ BOO (Build Own Operate) ಮಾದರಿಯಲ್ಲಿ PPP (Public Private Partnership) ಯಡಿಯಲ್ಲಿ ಸ್ಥಾಪಿಸಲು ಕ್ರಮವಹಿಸಲಾಗಿದೆ. |

**ಟಿಡಿ 62 ಟಿಡಿಕ್ಯೂ 2024**

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು.